ಸಿಸಿ. ನಂಬರಃ 557/2023

ಪಿ. ಡಬ್ಲ್ಯೂಃ 1

ದಿಃ 28-06-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ವಿ.ವಿ.ಎಸ್ ರವರಿಂದಃ

ನೀವು ದಿಃ13-06-2024 ರಂದು ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಕೊಟ್ಟ ಸಮಯದಲ್ಲಿ ನೀವು, ಚಾಸಾ-2 ಮತ್ತು 3 ರವರು ಬಂದಿದ್ದರು ಎಂದರೆ ಸರಿ. ಸಾಕ್ಷಿಯನ್ನು ಕೊಡುವ 2 ದಿನಗಳ ಪೂರ್ವದಲ್ಲಿ ಸರಕಾರಿ ವಕೀಲರ ಕಚೇರಿಗೆ ಬಂದು ಅವರಿಂದ ಯಾವ ರೀತಿ ಸಾಕ್ಷಿಯನ್ನು ಹೇಳಬೇಕು ಎಂದು ಮಾಹಿತಿ ಪಡೆದುಕೊಂಡು ಹೋಗಿರುತ್ತೀರಿ ಎಂದರೆ ಸಾಕ್ಷಿಯು ಆ ರೀತಿ ಮಾಡಿರುವುದಿಲ್ಲ, ಆದರೆ ನ್ಯಾಯಾಲಯದ ದಿನಾಂಕವನ್ನು ಕೇಳಿಕೊಂಡು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಆ ದಿನ ಯಾರ ಜೊತೆ ಬಂದಿದ್ದೀರಿ ಎಂದರೆ ಸಾಕ್ಷಿಯು ನನ್ನ ತಂದೆಯವರ ಜೊತೆ ಬಂದಿದ್ದೇನು ಎಂದು ನುಡಿಯುತ್ತಾರೆ. ಚಾಸಾ-3 ಇವರು ಸೂರ್ಯ ಸೊಸೈಟಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಅವರು ಜಾಸ್ತಿ ಸಮಯ ಸೂರ್ಯ ಸೊಸೈಟಿಯ ಪ್ರತಿನಿಧಿಯಾಗಿ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ನಡೆಸುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

2. ಘಟನೆಯಾಯಿತು ಎನ್ನುವ ದಿನದಂದು ನೀವು ಎಷ್ಟು ಗಂಟೆಗೆ ಮನೆಯಿಂದ ಹೊರಟೇರುತ್ತೀರಿ ಎಂದರೆ ಸಾಕ್ಷಿಯು ಬೆಳಿಗ್ಗೆ 8 ಗಂಟೆಗೆ ಅಂಗಡಿಯಿಂದ ಬಂದು ಸುಮಾರು 8.30 ಗಂಟೆಗೆ ಮನೆಯಿಂದ ಹೊರಟಿರುತ್ತೇನೆ ಎಂದು ನುಡಿಯುತ್ತಾರೆ. ಅಂಕೋಲಾ-ಬೆಲೇಕೆರಿ ರಸ್ತೆ ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹಾಯ್ದು ಹೋಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಮ್ಮ ಮನೆಯು ಅಂಕೋಲಾದಿಂದ ಬೆಲೆಕೇರಿಗೆ ಹೋಗುವ ರಸ್ತೆಯ ಯಾವ ದಿಕ್ಕಿನಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಎಡಬದಿಗೆ ಬರುತ್ತದೆ ಎಂದು ನುಡಿಯುತ್ತಾರೆ. ಘಟನೆಯಾಯಿತು ಎನ್ನುವುದು ಅಂಕೋಲಾದಿಂದ ಬೆಲೇಕೆರಿಗೆ ರಸ್ತೆಯ ಬಲಬದಿಯಲ್ಲಿ ಆಗಿರುತ್ತದೆ ಎಂದರೆ ಸರಿ. ನಿಮ್ಮ ಮನೆಯಿಂದ ಯಾವ ಸ್ಥಳದಲ್ಲಿ ರಸ್ತೆಯನ್ನು ದಾಟಿರುತ್ತೀರಿ ಎಂದರೆ ಸಾಕ್ಷಿಯು ನಾಗರಕಟ್ಟೆ ದೇವಸ್ಥಾನದವರೆಗೆ ಹೋಗಿ ಅಲ್ಲಿಂದಲೇ ದಾಟಿಕೊಂಡು ಬಂದಿರುತ್ತೇವೆ ಎಂದು ನುಡಿಯುತ್ತಾರೆ. ನಾಗರಕಟ್ಟೆ ದೇವಸ್ಥಾನವು ನಿಮ್ಮ ಮನೆಯಂದ ಅಂಕೋಲಾ ಕಡೆಗೆ ಅಥವಾ ಬೆಲೇಕೇರಿ ಕಡೆಗೆ ಇದೆಯಾ ಎಂದರೆ ಸಾಕ್ಷಿಯು ಬೆಲೆಕೇರಿ ಕಡೆಗೆ ಇದೆ ಎಂದು ನುಡಿಯುತ್ತಾರೆ. ಬೇಲೆಕೇರಿಗೆ ಹೋಗುವಾಗ ರಸ್ತೆಯ ಬಲಗಡೆ ಬರುತ್ತದೆ. ನಿಮ್ಮ ಮನೆಯಿಂದ ನಾಗರಕಟ್ಟೆ ದೇವಸ್ಥಾನವು ಎಷ್ಟು ದೂರವಾಗಹುದು ಎಂದರೆ ಸಾಕ್ಷಿಯು 200 ಮೀಟರ್ ಆಗಬಹುದು ಎಂದು ನುಡಿಯುತ್ತಾರೆ. ನಾಗರಕಟ್ಟೆ ದೇವಸ್ಥಾನದಿಂದ ಘಟನೆಯಾಯಿತು ಎನ್ನುವ ಸ್ಥಳವು ಎಷ್ಟು ದೂವಾಗಬಹುದು ಎಂದರೆ ಸುಮಾರು 400 ಮೀಟರ್ ಆಗಬಹುದು ಎಂದು ನುಡಿಯುತ್ತಾರೆ. ಬೇಲೇಕೆರಿಯಿಂದ ಅಂಕೋಲಾ ರಸ್ತೆ

ಕಡೆಗೆ ಬರಬೇಕಾದರೆ ನೀವು ರಸ್ತೆಯ ಯಾವ ಕಡೆಗೆ ಇದ್ದೀರಿ ಎಂದರೆ ಸಾಕ್ಷಿಯು ಎಡಬದಿಯಲ್ಲಿ ಬರುತ್ತಿದ್ದೇವು ಎಂದು ನುಡಿಯುತ್ತಾರೆ. ನೀವು ಬಲಗಡೆ ಬರುತ್ತೀದ್ದೀರಿ ಎಂದರೆ ಬೇಲೆಕೇರಿಯಿಂದ ಬರುವ ವಾಹನಗಳು ನಿಮ್ಮ ಹಿಂದೆ ಬರುತ್ತವೆ ಎಂದರೆ ಸರಿ.

3. ಘಟನೆಯಾಯಿತು ಎನ್ನುವ ಸ್ಥಳದಿಂದ ಅಂದಾಜು 100-150 ಮೀಟರ್ ಹಿಂದೆ ಸ್ಪೀಡ್ ಬ್ರೇಕರ್ ಇರುತ್ತದೆ ಎಂದರೆ ಸರಿ. ನಾಗರಕಟ್ಟೆಯ ದೇವಸ್ಥಾನ ಹಾಗೂ ಸ್ಪೀಡ್ ಬ್ರೇಕರ್ ಇರುವ ಸ್ಥಳವನ್ನು ಪೊಲೀಸರಿಗೆ ಏನಾದರೂ ತೋರಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಘಟನೆಯಾಯಿತು ಎನ್ನುವ ಸಂದರ್ಭದಲ್ಲಿ ನೀವು ನಿಮ್ಮ ಹೆಂಡತಿಯ ಯಾವ ಬದಿಯಲ್ಲಿ ಇದ್ದೀರಿ ಎಂದರೆ ಸಾಕ್ಷಿಯು ಎಡಬದಿ ಇದ್ದೇನು ಎಂದು ನುಡಿಯುತ್ತಾರೆ. ಘಟನೆಯಾಯಿತು ಎನ್ನುವ ಸಂದರ್ಭದಲ್ಲಿ ನೀವು ರಸ್ತೆಯಿಂದ ಎಷ್ಟು ಹೊರಗಡೆ ಕಚ್ಚಾ ರಸ್ತೆಯಲ್ಲಿ ಇದ್ದೀರಿ ಎಂದರೆ ಸಾಕ್ಷಿಯು ಒಂದೂವರೆ- ಎರಡು ಮೀಟರ್ ದೂರದಲ್ಲಿ ಇದ್ದೇವು ಎಂದು ನುಡಿಯುತ್ತಾರೆ. ಅಪಘಾತ ಸ್ಥಳವು ನಿಮ್ಮ ಮನೆಯಿಂದ ಎಷ್ಟು ದೂರ ಎಂದರೆ ಸಾಕ್ಷಿಯು ಅಂದಾಜು 150 ಮೀಟರ್ ಆಗಬಹುದು ಎಂದು ನುಡಿಯುತ್ತಾರೆ. 150 ಮೀಟರ್ ಬೇಲೆಕೇರಿ ಕಡೆಗಾ ಅಥವಾ ಅಂಕೋಲಾ ಕಡೆಗಾ ಎಂದರೆ ಅಂಕೋಲಾ ಕಡೆಗೆ ಎಂದು ನುಡಿಯುತ್ತಾರೆ. ಅಪಘಾತಪಡಿಸಿತು ಎನ್ನುವ ವಾಹನದ ಯಾವ ಭಾಗವು ನಿಮ್ಮ ಹೆಂಡತಿಗೆ ತಾಗಿತು ಎಂದರೆ ಸಾಕ್ಷಿಯು ಯಾವ ಭಾಗ ತಾಗಿತು ಎಂದು ನಾನು ನೋಡಿರುವುದಿಲ್ಲ, ಆದರೆ ಚಾಲಕನನ್ನು ನೋಡಿರುತ್ತೇನೆ

ಎಂದು ನುಡಿಯುತ್ತಾರೆ. ನಿಮ್ಮ ಹೆಂಡತಿಗೆ ಯಾವ ಭಾಗದಲ್ಲಿ ಗಾಯವಾಗಿತ್ತು ಎಂದರೆ ಸಾಕ್ಷಿಯು ತಲೆಯ ಹಿಂದೆ ಬಲಗಡೆ ಗಾಯವಾಗಿತ್ತು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಮೂಗಿನಿಂದ ರಕ್ತ ಬಂದಿತ್ತು ಎಂದು ನುಡಿಯುತ್ತಾರೆ. ಈ ರೀತಿ ಗಾಯವಾಗಿರುತ್ತವೆ ಎಂದರೆ ವಾಹನಕ್ಕೆ ಬಲವಾದ ಹಾನಿಯಾಗಿರಬಹುದು ಎಂದರೆ ಸರಿ.

3. ವಾಹನ ತಾಗಿದ ತಕ್ಷಣ ನಿಮ್ಮ ಹೆಂಡತಿ ಎಲ್ಲಿ ಬಿದ್ದರು ಎಂದರೆ ಸಾಕ್ಷಿಯು ನನ್ನ ಹೆಂಡತಿಯು ಹಾರಿ ರಸ್ತೆಯ ಮೇಲೆ ಬಿದ್ದಿರುತ್ತಾಳೆ ಎಂದು ನುಡಿಯುತ್ತಾರೆ. ಕಚ್ಚಾ ರಸ್ತೆಯಿಂದ ರಸ್ತೆಯ ಮೇಲೆ ಬೀಳುವಾಗ ವಾಹನ ಎಲ್ಲಿ ಇತ್ತು ಎಂದರೆ ಸಾಕ್ಷಿಯು ಆಕೆಯು ಹಾರಿ ಬೀಳುವಾಗ ವಾಹನವು ಆಕೆಯು ಹಿಂದೆಯೇ ಇತ್ತು ಎಂದು ನುಡಿಯುತ್ತಾರೆ. ನಿಮ್ಮ ಹೆಂಡತಿ ಹಾರಿ ಎಷ್ಟು ದೂರ ಬಿದ್ದಿರುತ್ತಾಳೆ ಎಂದರೆ ಸಾಕ್ಷಿಯು ಸುಮಾರು 8 ಅಡಿ ದೂರದಲ್ಲಿ ಬಿದ್ದಿರುತ್ತಾಳೆ ಎಂದು ನುಡಿಯುತ್ತಾರೆ.

4. ನೀವು ಯಾವ ಕೆಲಸ ಮಾಡುತ್ತೀರಿ ಎಂದರೆ ಸಾಕ್ಷಿಯು ಜೆರಾಕ್ಸ ಅಂಗಡಿ ಇದ್ದು, ಕಂಪ್ಯೂಟರಿನಲ್ಲಿ ಕೆಲಸ ಮಾಡುತ್ತೇನೆ ಎಂದು ನುಡಿಯುತ್ತಾರೆ. ಯಾವ ರೀತಿ ಪೇಜ್ ಸೆಟ್ಟಿಂಗ್ ಮಾಡಬೇಕು ಹಾಗೂ ಬರೆಯಬೇಕು ಎಂಬುದು ನನಗೆ ಗೊತ್ತಿರುತ್ತದೆ ಎಂದರೆ ಸರಿ. ಫಿರ್ಯಾದಿಯನ್ನು ಯಾವಾಗ ಬರೆದಿರುತ್ತೀರಿ ಎಂದರೆ ಸಾಕ್ಷಿಯು ಅಪಘಾತವಾದ ದಿನದಂದೇ ಬರೆದಿರುತ್ತೇನೆ. ದೂರನ್ನು ಇದೇ ರೀತಿ ಬರೆಯಿರಿ ಎಂದು ಯಾರಾದರೂ

ಹೇಳಿದ್ದರಾ ಎಂದರೆ ಇಲ್ಲ ನಾನೇ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ದೂರಿನಲ್ಲಿ ಪ್ಯಾರಾ ಮತ್ತು ಮಾರ್ಜೀನ್ ಸರಿಯಾಗಿ ಇರುವುದಿಲ್ಲ ಎಂದರೆ ಸರಿಯಲ್ಲ. ದೂರು ಸುಳ್ಳಾಗಿದ್ದರಿಂದ ಈ ರೀತಿಯಾಗಿ ಅಡ್ಜೆಸ್ಟ ಮಾಡಿಕೊಂಡು ಸುಳ್ಳು ದೂರನ್ನು ಬರೆದಿದ್ದ ಕಾರಣ ಸರಿಯಾದ ಮಾರ್ಜೀನ್ ಮತ್ತು ಪ್ಯಾರಾ ಇರುವುದಿಲ್ಲ ಎಂದರೆ ಸರಿಯಲ್ಲ.

5. ಮಾರನೇ ದಿನ ಪಂಚನಾಮೆ ಮಾಡಿದರು ಎನ್ನುವ ಸಮಯದಲ್ಲಿ ಎಷ್ಟು ಜನ ಪೊಲೀಸರು ಬಂದಿದ್ದರು ಎಂದರೆ ಸಾಕ್ಷಿಯು ಸಿ ಪಿ ಐ ಮತ್ತು ಇನ್ನಿಬ್ಬರು ಬಂದಿದ್ದರು ಎಂದು ನುಡಿಯುತ್ತಾರೆ. ಪಂಚನಾಮೆಗೆ ಪಂಚರನ್ನು ಯಾರು ಕರೆದಿದ್ದರು ಎಂದರೆ ಸಾಕ್ಷಿಯು ಅಪಘಾತವಾದ ಸಮಯದಲ್ಲಿ ಸೇರಿದ್ದ ಜನರಲ್ಲಿಯೇ ಪಂಚರನ್ನು ಕರೆದಿರುತ್ತಾರೆ ಎಂದು ನುಡಿಯುತ್ತಾರೆ. ಪಂಚನಾಮೆಗೆ ಎಷ್ಟು ಜನ ಸೇರಿದ್ದರು ಎಂದರೆ ಸಾಕ್ಷಿಯು 15-20 ಜನರು ಸೇರಿದ್ದರು ಎಂದು ನುಡಿಯುತ್ತಾರೆ. ಅಪಘಾತವಾಯಿತು ಎನ್ನುವ ಸಮಯದಲ್ಲಿ ಎಷ್ಟು ಜನವರು ಸೇರಿದ್ದರು ಎಂದರೆ ಸಾಕ್ಷಿಯು 4-5 ಜನರು ಸೇರಿದ್ದರು ಎಂದು ನುಡಿಯುತ್ತಾರೆ. ಅವರು ಎಷ್ಟು ದೂರದಲ್ಲಿ ಇದ್ದರು ಎಂದರೆ ಸಾಕ್ಷಿಯು ಅಲ್ಲಿಯೇ ಕುಳಿತುಕೊಂಡಿದ್ದರು ಎಂದು ನುಡಿಯುತ್ತಾರೆ. ಅಪಘಾತವಾಯಿತು ಎನ್ನುವ ಸ್ಥಳದ ಅಕ್ಕಪಕ್ಕ ಬೇರೆ ಬೇರೆ ಜಾತಿಯವರ ಮನೆಗಳು ಇರುತ್ತವೆ ಎಂದರೆ ಸರಿ. ಶಿವಮ್ಮ ವಸಂತ ಕವರಿ ಹಾಗೂ ಬಾಲಚಂದ್ರ ನಾಯಕ ಇವರು ನಿಮ್ಮ ಜಾತಿಯವರು ಎಂದರೆ ಸರಿ. ಇವರ ಮನೆಯಿಂದ ಮತ್ತು ಅಪಘಾತವಾದ ಸ್ಥಳದ ಸಮೀಪದಲ್ಲಿ ಚೋಳಾ, ಉದಯ ಮತ್ತು

ಮಂಜು ಇವರ ಮನೆಗಳು ಇರುತ್ತವೆ ಎಂದರೆ ಸರಿ. ಪೊಲೀಸರು ಏನಾದರೂ ಪಂಚನಾಮೆಗೆ ಬಂದಿದ್ದರು ಎನ್ನುವ ಸಮಯದಲ್ಲಿ ಮೇಲೆ ಹೇಳಿದ ಮೂವರ ಮನೆಗೆ ಹೋಗಿ ವಿಚಾರಣೆ ಮಾಡಿರುತ್ತಾರಾ ಎಂದು ಏನಾದರೂ ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

6. ನೀವು ಅಪಘಾತದ ಪರಿಹಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿ. ಇತ್ತೀಚೆಗೆ ನೀವು ಇನ್ನೊಂದು ಮದುವೆಯಾಗಿರುತ್ತೀರಿ ಎಂದರೆ ಸರಿ. ಆ ದಿನ 1 ನೇ ಆರೋಪಿಯ ವಾಹನವು ನಿಮ್ಮ ಹೆಂಡತಿ ಶೋಭಾಗೆ ಎಲ್ಲಿಯೂ ಸಹ ತಾಗಿರುವುದಿಲ್ಲ ಎಂದರೆ ಸರಿಯಲ್ಲ. ಅವಳಿಗೆ ವಾಹನ ತಾಗದಿದ್ದರೂ ಸಹ ಪರಿಹಾರನ್ನು ಪಡೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ಸುಳ್ಳು ದೂರನ್ನು ಕೊಟ್ಟು, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಯಾರು ಬರೆದಿರುತ್ತಾರೆ ಎಂದರೆ ಪೊಲೀಸರು ಬರೆದಿರುತ್ತಾರೆ. ಅದನ್ನು ಬರೆಯಲು ಯಾರು ಹೇಳಿದರು ಎಂದರೆ ಗೊತ್ತಿರುವುದಿಲ್ಲ. ನಕಾಶೆಯನ್ನು ಯಾವುದರಿಂದ ಬಿಡಿಸಿದರು ಎಂದರೆ ಸಾಕ್ಷಿಯು ಪೆನ್ನಾ ಅಥವಾ ಪೆನ್ಸಿಲ್ಲಾ ಎಂದು ಅಷ್ಟಾಗಿ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಸಹಿ ಮಾಡಿದ ದಾಖಲೆಗಳ ಮಜಪೂರಗಳನ್ನು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನಕಾಶೆ ಹಾಗೂ ಪಂಚನಾಮೆಗಳಲ್ಲಿ ರಸ್ತೆಯ ಉದ್ದ ಹಾಗೂ ಅಗಲಗಳನ್ನು ಸರಿಯಾಗಿ ನಮೂದು ಮಾಡಿರುತ್ತಾರಾ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಹೌದು ಎಂದು

ನುಡಿಯುತ್ತಾರೆ. ಪಂಚನಾಮೆಯಲ್ಲಿ ಅಪಘಾತ ಯಾವ ಸ್ಥಳದಲ್ಲಿ ಆಯಿತು ಎನ್ನುವ ವಿವರಣೆ ಇರುವುದಿಲ್ಲ, ಆದರೆ ಶೋಭಾ ಎಲ್ಲಿ ಬಿದ್ದಿರುತ್ತಾಳೆ ಎನ್ನುವ ಸ್ಥಳದ ವಿವರಣೆ ಇರುತ್ತದೆ ಎಂದರೆ ಸರಿ. ಸದರಿ ಪ್ರಕರಣ ಸುಳ್ಳಾಗಿದ್ದರಿಂದ ನಕಾಶೆ ಹಾಗೂ ಪಂಚನಾಮೆಯಲ್ಲಿ ಅಪಘಾತ ಸ್ಥಳವನ್ನು ಹಾಗೂ ಬಿದ್ದಿರುವ ಸ್ಥಳದ ಸರಿಯಾದ ವಿವರಣೆ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾಯಿತು ಎನ್ನುವ ಸ್ಥಳದಲ್ಲಿ ವಿದ್ಯುತ್ ಕಂಬಗಳು ಇದ್ದವು ಎಂದರೆ ಸರಿ. ಎಷ್ಟು ಇದ್ದವು ಎಂದರೆ ಸಾಕ್ಷಿಯು ಒಂದು ಕಡೆ 2 ಇದ್ದು, ಇನ್ನೊಂದು ಕಡೆ ಒಂದು ಇದ್ದೀತು ಎಂದು ನುಡಿಯುತ್ತಾರೆ. ಎಲ್ಲ ಕಂಬಗಳು ಸಮೀಪದಲ್ಲಿಯೇ ಇರುತ್ತವೆ ಎಂದರೆ ಸಾಕ್ಷಿಯು ಒಂದೊಂದು ಅಡಿ ಅಂತರದಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ವಿದ್ಯುತ್ ಕಂಬಗಳು ಡಾಂಬರು ರಸ್ತೆಯ ಅಂಚಿನಿಂದ ಎಷ್ಟು ಅಂತರದಲ್ಲಿ ಇರುತ್ತವೆ ಎಂದರೆ ಗೊತ್ತಿರುವುದಿಲ್ಲ. ಅಪಘಾತದ ಸ್ಥಳದಿಂದ ಎಷ್ಟು ಅಂತರದ ಹಿಂದುಗಡೆ ಈ ಕಂಬಗಳು ಇರುತ್ತವೆ ಎಂದರೆ ಸಾಕ್ಷಿಯು ಅಂದಾಜು ಒಂದರಿಂದ ಒಂದೂವರೆ ಅಡಿ ಅಂತರದಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ಅಪಘಾತ ಸ್ಥಳದ ರಸ್ತೆಯ ಎರಡೂ ಬದಿಯ ಜನರು ಚೀರೆ ಕಲ್ಲನ್ನು ಶೇಖರಿಸಿ ಇಟ್ಟಿರುತ್ತಾರೆ ಎಂದರೆ ಸರಿ. ಅಪಘಾತವಾದ ಸ್ಥಳದಲ್ಲಿ ಏನಾದರೂ ಚೀರೆ ಕಲ್ಲನ್ನು ಶೇಖರಿಸಿ ಇಟ್ಟಿದ್ದರಾ ಎಂದರೆ ಸಾಕ್ಷಿಯು ರಸ್ತೆಯ ಬಲಬದಿಯಲ್ಲಿ ಇಟ್ಟಿದ್ದರು ಎಂದು ನುಡಿಯುತ್ತಾರೆ.

7. ವಾಹನ ಎಷ್ಟು ವೇಗವಾಗಿ ಬರುತ್ತಿತ್ತು ಎಂದರೆ ಸಾಕ್ಷಿಯು ಹೇಳಲಿಕ್ಕೆ ಆಗುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿಯ ವಾಹನ ನಿಮ್ಮ ಹೆಂಡತಿಗೆ ತಾಗಿರುವುದಿಲ್ಲ ಹಾಗೂ ಆತನು ಯಾವುದೇ ವೇಗ ಹಾಗೂ ನಿಷ್ಕಾಳಜೀತನದಿಂದ ಚಾಲನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ–2 ರಿಂದ 13 ರವರು ಒಂದೇ ಸಮಾಜಕ್ಕೆ ಸೇರಿದವರು ಎಂದರೆ ಸಾಕ್ಷಿಯು ಚಾಸಾ–11 ರವರು ಒಂದೇ ಜಾತಿಯವರು ಅಲ್ಲ ಎಂದು ನುಡಿಯುತ್ತಾರೆ. ಚಾಸಾ–11 ರವರ ಮನೆ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಅವರ ಮನೆಯು ಹಟ್ಟಿಕೇರಿಯಾಗಿದ್ದು, ಅಪಘಾತವಾದ ಸ್ಥಳದ ಬಲಬದಿಯಲ್ಲಿ ಗ್ಯಾರೇಜ್ ಇಟ್ಟುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ–2 ಮತ್ತು 3 ರವರ ಮನೆ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ನಾಗರಕಟ್ಟೆಯ ದೇವಸ್ಥಾನದ ಅಕ್ಕಪಕ್ಕ ಬರುತ್ತದೆ ಎಂದು ನುಡಿಯುತ್ತಾರೆ. ಅಪಘಾತವಾಯಿತು ಎನ್ನುವ ಸಂದರ್ಭದಲ್ಲಿ ಹಾಗೂ ಪಂಚನಾಮೆ ಆಯಿತು ಎಂದು ಹೇಳುವ ಸಂದರ್ಭದಲ್ಲಿ ಬೇರೆ ಬೇರೆ ಜಾತಿಯವರೂ ಸಹ ಸೇರಿದ್ದರು ಎಂದರೆ ಸರಿ. ವಾಹನದ ಯಾವ ಭಾಗಕ್ಕೆ ಜಖಂ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ ಎಂದರೆ ಸರಿ. ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದಾಗಲಿ, ಯಾವುದೇ ಪಂಚನಾಮೆಯನ್ನು ಮಾಡಿದ್ದಾಗಲಿ, ನಕಾಶೆಯನ್ನು ಹಾಗೂ ಪೊಟೋಗಳನ್ನು ಪಡೆದಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ಪರಿಹಾರವನ್ನು ಕೊಡಿಸಬೇಕು ಎನ್ನುವ ಉದ್ದೇಶದಿಂದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ನಕಾಶೆ, ಪಂಚನಾಮೆ ಹಾಗೂ ಪೊಟೋಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾಹನಕ್ಕೆ ರವಿ

ನಾಯಕ ಚಾಲಕನಾಗಿದ್ದನು ಎಂದು ನಾನು ನೋಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.